SN – 095

(13)

# III Semester B.C.A. Examination, November/December 2013
## (Repeaters Scheme) (2011-12 Only)
## ಕನ್ನಡ ಭಾಷಾ ಪತ್ರಿಕೆ - III
## ಸಾಹಿತ್ಯ ಸಲ್ಲಾಪ - ೨

Time : 3 Hours Max. Marks : 90

1. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(5×1=5)**

   ಅ) ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ.

   ಓತು ಬಂದವರನುಪಚರಿಸದಿಪ್ಪುದು ನಿನಗೆ ನೀತಿಯಲ್ಲ.

   ಆ) ಈ ವಾಕ್ಯದ ವಚನದೋಷವನ್ನು ಸರಿಪಡಿಸಿ –

   ಅನೇಕ ಪ್ರಾಣಿ, ಮನುಷ್ಯನಿಗಿಂತ ಬಲಿಷ್ಠವಾಗಿವೆ.

   ಇ) ಈ ವಾಕ್ಯದ ಲಿಂಗವನ್ನು ಬದಲಿಸಿ ಬರೆಯಿರಿ :

   ಇಂದ್ರಿಯಗಳಿಗೆ ಕಣ್ಣೇ ರಾಣಿ.

   ಈ) ಈ ವಾಕ್ಯದ ಪ್ರತ್ಯಯವನ್ನು ಬದಲಿಸಿ ಬರೆಯಿರಿ :

   'ಈ ಶಿಲ್ಪದಲ್ಲಿ ಅದ್ಭುತ ಕಳೆಯಿದೆ'.

   ಉ) ಈ ವಾಕ್ಯವನ್ನು ಭೂತಕಾಲ ರೂಪಕ್ಕೆ ಬದಲಿಸಿ ಬರೆಯಿರಿ :

   ಮಂದಕ್ಕನ ಕಣ್ಣಿನಿಂದ ನೀರು ಕೋಡಿಯಾಗಿ ಹರಿಯುತ್ತಿದೆ.

2. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **(5×1=5)**

   ಅ) ಈ ವಾಕ್ಯವನ್ನು ಹೇಳಿಕೆಯಾಗಿ ಪರಿವರ್ತಿಸಿ –

   ನಗೋದಕ್ಕೂ ಏನಾದರೂ ಕಾರಣ ಬೇಡವೇ ?

   ಆ) ಈ ವಾಕ್ಯವನ್ನು ಪ್ರಶ್ನೆಯಾಗಿ ಪರಿವರ್ತಿಸಿ –

   ವಿದ್ಯೆ ಇದ್ದರೂ ನೌಕರಿ ಸಿಗುವ ಖಾತ್ರಿ ಇಲ್ಲ.

P.T.O.

ಇ) ಈ ವಾಕ್ಯವನ್ನು **ಎರಡು** ಸರಳ ವಾಕ್ಯಗಳಲ್ಲಿ ಬರೆಯಿರಿ :

ಭ್ರಷ್ಟಾಚಾರವನ್ನು ತೊಲಗಿಸಿ ದೇಶವನ್ನು ಸಂರಕ್ಷಿಸುವ ಕಾರ್ಯವನ್ನು ನಮ್ಮ ಯುವ ಜನತೆ ಮಾಡಬೇಕಾಗಿದೆ.

ಈ) ಈ ವಾಕ್ಯಗಳನ್ನು **ಒಂದು** ವಾಕ್ಯದಲ್ಲಿ ಬರೆಯಿರಿ :

ಅವಳಿಗೆ ಶಾವಿಗೆ, ಪತ್ರೊಡೆ ಎಂದರೆ ಪಂಚಪ್ರಾಣ. ಅವಳು ಬಂದಾಗಲೆಲ್ಲ ಅದನ್ನೇ ಮಾಡುತ್ತೇನೆ.

ಉ) ಸೂಕ್ತ ಲೇಖನ ಚಿಹ್ನೆಗಳನ್ನು ಬರೆಯಿರಿ.

ಹಿಡಿಯಪ್ಪ ಬರೇ ಹಣ್ಣ ಯಾಕ ತಿಂತೀ ಹಸಿದು ಹಣ್ಣು ತಿನ್ನಬಾರದು ಇಕಾ ಈ ರೊಟ್ಟಿ ತಿನ್ನು.

3. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(5×1=5)**

ಅ) ಈ ನುಡಿಗಟ್ಟನ್ನು ಬಳಸಿ ವಾಕ್ಯ ರಚಿಸಿ – 'ಗಂಟಲು ಕಟ್ಟು'.

ಆ) 'ನೀನು ಇಷ್ಟೊಂದು ಎಮೋಷನಲ್ ಎಂದು ಗೊತ್ತೇ ಇರಲಿಲ್ಲ' – ಈ ಬಗೆಯ ನುಡಿಬೆರಕೆಯ ಒಂದು ವಾಕ್ಯವನ್ನು ಬರೆಯಿರಿ.

ಇ) ಹೂವಿನಂಥಾ ಹೃದಯ – ಈ ಉಪಮೆಯನ್ನು ಬಳಸಿ ಒಂದು ವಾಕ್ಯವನ್ನು ರಚಿಸಿ.

ಈ) ವಕ್ರಬುದ್ಧಿ – ಈ ರೂಪಕವನ್ನು ಬಳಸಿ ಒಂದು ವಾಕ್ಯವನ್ನು ರಚಿಸಿ.

ಉ) 'ಕಾಣಬೇಕಾದರೆ ಸಮಾನತೆ ಹೊಡೆದೋಡಿಸು ಭ್ರಷ್ಟತೆ' – ಈ ಮಾದರಿಯ ಘೋಷವಾಕ್ಯವೊಂದನ್ನು ಸಿದ್ಧಪಡಿಸಿ.

4. ಈ ಪದ್ಯದ ಅರ್ಥವನ್ನು ವಿಸ್ತರಿಸಿ : **(1×5=5)**

ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನಾ ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರಕೊಂಡಲ್ಲಿ ಫಲವೇನು ಸಾವ ಹೊತ್ತು
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವವಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂನಾಥ ಹೇಳೆನುತ ಮತ್ತಿಂತೆಂದರು ॥

5. ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. **(2×5=10)**

ವೈದೇಹಿ, ಬೆಸಗರ ಹಳ್ಳಿ ರಾಮಣ್ಣ, ವಚನ ಸಾಹಿತ್ಯ, ಮಾಬಲ.

6. ಕೆಳಗಿನ ಪ್ರಶ್ನೆಗಳಿಗೆ **20** ಸಾಲುಗಳಿಗೆ ಮೀರದಂತೆ ಉತ್ತರಿಸಿ : **(4×5=20)**

1) ನಡೆ-ನುಡಿಯನ್ನು ಕುರಿತು ಚಂದಯ್ಯನ ವಚನದಲ್ಲಿ ನಿರೂಪಿತವಾಗಿರುವ ಚಿಂತನೆಗಳೇನು ?

**ಅಥವಾ**

ವಿಶ್ವಾಮಿತ್ರನ ಸಂಚಿನ ಹಿನ್ನೆಲೆಯೇನು ?

2) ಮಂಗಗಳಿಗೆ ಮಂಚನು ನೀಡಿದ್ದ ತರಬೇತಿ ಏನು ?

**ಅಥವಾ**

ಮಗಳಿಗಾಗಿ ಕಾಯುತ್ತಿದ್ದ ಮಂದಕ್ಕನಿಗೆ ಶಾರದೆಯ ವರ್ತನೆಯಿಂದ ಉಂಟಾದ ಆಘಾತವೇನು ?

3) ಬೆಳ್ಚಿ ಗ್ರಾಮದ ಸ್ಥಿತಿ-ಗತಿ ಹೇಗಿತ್ತು ?

**ಅಥವಾ**

ಜಮೀನ್ದಾರನ ಪಾತ್ರವನ್ನು ಪರಿಚಯಿಸಿ.

4) ಪ್ರನಾಳ ಶಿಶು ಮಹಿಳೆಗೆ ವರದಾನವೇ ?

**ಅಥವಾ**

ಪಕ್ಷಿಲೋಕದ ವಿಸ್ಮಯವನ್ನು ಕುರಿತು 'ಹದ್ದು' ಪ್ರಬಂಧದಲ್ಲಿ ಮೂಡಿ ಬಂದಿರುವ ವಿವರಗಳೇನು ?

7. ಈ ಕೆಳಕಂಡ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ವಿವರವಾಗಿ ಉತ್ತರಿಸಿ : **(4×10=40)**

1) ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವಿನ ಸಂವಾದವನ್ನು ವಿವರಿಸಿ.

**ಅಥವಾ**

'ಚಾಮುಂಡೆವ್ವಗ ಒಂದು ಮನವಿ' – ಕವನದಲ್ಲಿ ವ್ಯಕ್ತವಾಗಿರುವ ಸ್ತ್ರೀಸಂವೇದನೆಯ ಸ್ವರೂಪವನ್ನು ವಿಶ್ಲೇಷಿಸಿ.

2) ‘ಪರಾಧೀನ ಬದುಕು ಅಸಹನೀಯ’ – ಎಂಬುದನ್ನು ‘ಮರಗಿಡಬಳ್ಳಿ’ – ಕಥೆಯು ಹೇಗೆ ನಿರೂಪಿಸುತ್ತದೆ ?

**ಅಥವಾ**

‘ನಗು’ – ಕಥೆಯಲ್ಲಿನ ಸಾಮಾಜಿಕ ವಿಡಂಬನೆಯನ್ನು ಕುರಿತು ಬರೆಯಿರಿ.

3) ಬೆಲ್ಚಿ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ವಿಶ್ಲೇಷಿಸಿ.

**ಅಥವಾ**

ಸಿಂಘ್ವನ ಪಾತ್ರವನ್ನು ಪರಿಚಯಿಸಿ.

4) ವಿಜ್ಞಾನದ ಆವಿಷ್ಕಾರಗಳು ಮಹಿಳೆಯ ಬೆಳವಣಿಗೆಗೆ ಪೂರಕವೇ ? ಇಲ್ಲವೇ ? ಚರ್ಚಿಸಿ.

**ಅಥವಾ**

ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯ ಸ್ವರೂಪವನ್ನು ಕುರಿತ ಆತಂಕ ಎಚ್.ನರಸಿಂಹಯ್ಯನವರ ಲೇಖನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

---